ಬಂದರು.

ಕಚೇರಿ ಒಳಕ್ಕೆ ಬಂದು ಎರಡು ನಿಮಿಷ ಆಗಿರಲಿಲ್ಲ. ಜವಾನ ಬಂದು 'ಯಾರೋ ಶಫಿ ಅಂತೆ, ನಿಮ್ಮನ್ನ ನೋಡಬೇಕಂತೆ' ಅಂದ. ಶಫೀನಾ? ಅವನೇ ಇರಬಹುದಾ ಎಂದು ಒಂದು ಕ್ಷಣ ಯೋಚಿಸಿದ ಶಂಕರಪ್ಪ 'ಸರಿ, ಕಳ್ಸು ಒಳಗೆ' ಅಂದರು. ಒಳಕ್ಕೆ ಬರಬರುತ್ತಿದ್ದಂಗೆ ಶಫಿ ಕುದುರಿ ಮ್ಯಾಲ ಕುಂತವನಂಗೆ 'ನಮ್ಮವ್ವನ ಹೊಲದ ಪತ್ರ ನಿಮ್ಮತ್ರನೇ ಐತಿ ಅಂತ ನಂಗೊತ್ತು' ಅಂದ. 'ಹೌದು, ನನ್ನಂತ್ಯಾಕೇ ಐತಿ, ಏನೀಗ' ಅಂದರು ಶಂಕರಪ್ಪ. 'ಅದನ್ನ ಹೆಂಗೆ ಇಸ್ಕೋಬೇಕು ನಂಗೆ ಗೊತ್ತೇತಿ' ಎಂದವನೇ ಬಂದಷ್ಟೇ ವೇಗದಲ್ಲಿ ಹೊರಕ್ಕೆ ಹೋದ. ನನ್ನ ಮೇಲೇ ಗೂಂಡಾಗಿರಿ ಮಾಡ್ತಾನೇನಿವ, ಎಮಿಕಿ ಮುರಿಸಿದ್ರೆ ಗೊತ್ತಾಕ್ಕತಿ ಎಂದು ಒಳಗೇ ಕುದ್ದು ಹೋದರು ಶಂಕರಪ್ಪ.

ಮನಿಗೆ ಬಂದ ಮೇಲೆ ಹೇಂಣ್ತಿ ಗಂಗವ್ವನತ್ರ ಶಫಿ ಆಫೀಸ್‌ಗೆ ಬಂದದ್ದೂ, ಜಮೀನು ಪತ್ರದ ವಿಷಯಕ್ಕೆ ಧಮಕಿ ಹಾಕಿ ಹೋಗಿದ್ದೂ ಎಲ್ಲ ವಿಷಯ ಹೇಳಿದರು ಶಂಕರಪ್ಪ.

'ಅಯ್ಯೋ ಸಿವನೆ, ಮೊದ್ಲು ಆ ಪತ್ರ ಒಯ್ದು ಹುಸೇನವ್ವನ ಕೈಗೆ ಕೊಟ್ಟು ಬರ್ರಿ. ಅದರ ಉಸಾಬರಿ ನಮಿಗೆ ಬ್ಯಾಡ' ಗಂಗವ್ವನ ಮುಖದಲ್ಲಿ ಆತಂಕ ಎದ್ದು ಕಾಣುತ್ತಿತ್ತು. 'ನಿನ್ತೆಲಿ, ಈಟಕ್ಕೆಲ್ಲ ಹೆದರ್‍ತಾರೇನು, ಇಡೀ ಜಿಲ್ಲಾ ನನ್ ಕೈಯಾಗೈತಿ, ನಾ ಒಂದು ಮಾತು ಹೇಳಿದ್ರ ಅವ ಸಾಯೊಮಟ ಜೈಲಿನಾಗಿರ್ತಾನ' ಎಂದರು ಶಂಕರಪ್ಪ.

ಮರುದಿವಸ ಪೊಲೀಸ್ ಇನ್‌ಸ್ಪೆಕ್ಟರೊಬ್ಬರು ಶಂಕರಪ್ಪರನ್ನು ಭೇಟಿಯಾಗಿ 'ಅದ್ಯಾರೋ ಶಫಿ ಅನ್ನೋವ ತಂಜೀಂ ಕಮಿಟಿಯ ಕೆಲವರ ಜತಿ ಬಂದು ನಿಮ್ ಮ್ಯಾಲ ಒಂದು ಕಂಪ್ಲೇಂಟ್ ಕೊಟ್ಟಾನ. ನೀವೇನೋ ಅವರ ಹೊಲದ ಪತ್ರ ಜಬರ್‌ದಸ್ತಾಗಿ ಕಸ್ಕೊಂಡ್ ಇಟ್ಕಂಡೀರಂತೆ. ಎಸ್ಪಿ ಆಫೀಸಿಗೆ ಅವರನ್ನ ಬರಾಕೆ ಹೇಳೀನಿ, ನೀವು ಒಮ್ಮಿ ಬಂದು ಹೋದ್ರೆ ಎಲ್ಲ ಅಲ್ಲೇ ಬಗೆ ಹರೀತತಿ' ಎಂದರು. 'ಆತು ಬರ್ತೇನಿ' ಶಂಕರಪ್ಪ ತಲೆಯಾಡಿಸಿದರಾದರೂ 'ಒಬ್ಬ ರೌಡಿಶೀಟರ್ ಕಂಪ್ಲೇಂಟಿಗೆ ನೀವು ಇಲ್ಲಿಮಟ ಬಂದೀರಲ್ಲ' ಅಂದರು. 'ಏನ್ ಮಾಡ್ಲಿ ಸರ, ತಂಜೀಂ ಕಮಿಟಿಯೋರು ಜತಿಗಿದ್ರು' ಅಂದರು ಇನ್‌ಸ್ಪೆಕ್ಟರು.



ಆ ಕೂಡಲೇ ಶಂಕರಪ್ಪ ಮನಿಗೆ ಬಂದು ಹುಸೇನವ್ವನ ಹೊಲದ ಪತ್ರ ತೆಗೆದು ಕೊಂಡು ಸೀದಾ ಆಸ್ಪತ್ರಿಗೆ ಹೋದರು. ಸ್ವಲ್ಪ ಆರಾಮಾಗಿ ಎದ್ದು ಕೂತಿದ್ದ ಹುಸೇನವ್ವನ ಕೈಗೆ ಹೊಲದ ಪತ್ರ ಕೊಟ್ಟು ಶಫಿ ಮಾಡಿದ ರಾದ್ಧಾಂತನೆಲ್ಲ ಬಿಡಿಸಿ ಹೇಳಿದರು. ಅದೇ ಕಾರಣಕ್ಕೆ ಈಗ ಎಸ್ಪಿ ಆಫೀಸಿಗೆ ಹೋಗ್ತಿರೋದಾಗಿಯೂ ತಿಳಿಸಿ ಎದ್ದು ಬಂದರು.

ಎಸ್ಪಿ ಆಫೀಸಲ್ಲಿ ಖುದ್ದು ಎಸ್ಪಿ ಸಾಹೇಬರೇ ಎದ್ದು ನಿಂತು ಕೈ ಕುಲುಕಿ ಶಂಕರಪ್ಪರನ್ನು ಬರ ಮಾಡಿಕೊಂಡರು. ತಂಜೀಂ ಕಮಿಟಿಯ ನಾಲ್ವರು ಕುರ್ಚಿಗಳ ಮೇಲೆ ಕುಂತಿದ್ದರೆ ಶಫಿ ಮೂಲೆಯಲ್ಲಿ